**ಸಾಕ್ಷಿಗೆ ದಿನಾಂಕ:16-09-2025 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಪಾಟೀ ಸವಾಲು :: ಪ್ರತಿವಾದಿ ಪರ ಶ್ರೀ. BPR ವಕೀಲರಿಂದ ::**

ನಾನು ತರೀಕೆರೆಯಲ್ಲಿ 10 ನೇ ತರಗತಿಯವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ವಾದ ಪತ್ರದಲ್ಲಿ ಹೇಳಿರುವ ತಿಮ್ಮಣ್ಣನಿಗೆ ದಾಸಪ್ಪ ಮತ್ತು ಹನುಮಂತಪ್ಪ ಎನ್ನುವ ಇಬ್ಬರು ಮಕ್ಕಳು ಇದ್ದರು. ನಾನು ಹೇಳುತ್ತಿರುವ ಹನುಮಂತಪ್ಪರವರಿಗೆ 4 ಜನ ಹೆಣ್ಣು ಮಕ್ಕಳಿದ್ದು ಅವರ ಹೆಸರುಗಳು ನನಗೆ ಗೊತ್ತಿಲ್ಲ. ದಾಸಪ್ಪ ರವರಿಗೆ ಮೂರು ಗಂಡು ಮಕ್ಕಳು (ಕುಮಾರ್, ಆಂಜನೇಯ ಮತ್ತು ಪ್ರಕಾಶ್) ಮತ್ತು ಇಬ್ಬರು ಹೆಣ್ಣು ಮಕ್ಕಳು (ಮಮ್ಮಿ ಮತ್ತು ಮತ್ತೊಬ್ಬರ ಹೆಸರು ನನಗೆ ನೆನಪಿಲ್ಲ). ನನ್ನ ಅಜ್ಜನ ಹೆಸರು ಕೆಂಚಪ್ಪ ಆಗಿರುತ್ತದೆ. ನಾನು ಈಗ ಹೇಳಿರುವ ಪ್ರಕಾಶ್ ಎನ್ನುವವರು ಈಗಲೂ ಸಹ ಜೀವಂತವಾಗಿರುತ್ತಾರೆ. ನಮ್ಮನ್ನು ಕೆರೆಹೊಸಹಳ್ಳಿಯ ಪೂಜಾರಿ ವಂಶಸ್ಥರು ಎಂದು ಕರೆಯುತ್ತಾರೆ. ನಮ್ಮ ವಂಶದಲ್ಲಿ 4 ಕುಟುಂಬಗಳು ಪ್ರಸ್ತುತದಲ್ಲಿ ಇರುತ್ತವೆ. ಪ್ರತಿವಾದಿಗಳು ಸಹ ನಮ್ಮ ವಂಶಕ್ಕೆ ಸೇರಿದ ವ್ಯಕ್ತಿ ಆಗಿರುತ್ತಾರೆ.

ದಾವಾ ಸರ್ವೇ ನಂಬರ್ 60 ರ ಒಟ್ಟು ವಿಸ್ತೀರ್ಣ 2 ಎಕರೆ 34 ಗುಂಟೆ ಇದ್ದು, ಅದರಲ್ಲಿ 4 ಗುಂಟೆ ಖರಾಬು ಇರುತ್ತದೆ. ದಾವಾದಲ್ಲಿ ಹೇಳಿರುವ ಬಸಪ್ಪ ಬಿನ್ ನಿಂಗಪ್ಪ ರವರು ಈಗ ಜೀವಂತವಾಗಿರುವುದಿಲ್ಲ, ಆದರೆ ಅವರ ಮಗ ಕೆ ಬಿ ಮಲ್ಲೇಶಪ್ಪ ರವರು ಜೀವಂತವಾಗಿರುತ್ತಾರೆ. ದಾವಾ ಶೆಡ್ಯೂಲ್ ಸ್ವತ್ತು ಕೆರೆಹೊಸಹಳ್ಳಿ ಗ್ರಾಮದ ಉತ್ತರ ದಿಕ್ಕಿನಲ್ಲಿ ಬರುತ್ತದೆ. ದಾವಾ ಶೆಡ್ಯೂಲ್ ಸ್ವತ್ತು ಕೆದಗಿಕಟ್ಟೆಯ ಕೆರೆಯ ಉತ್ತರ ದಿಕ್ಕಿನಲ್ಲಿ ಇರುತ್ತದೆ. ಸರ್ವೇ ನಂಬರ್ 60 ರಲ್ಲಿ 16 ವರೆ ಗುಂಟೆ, ಸರ್ವೇ ನಂಬರ್ 58 ರಲ್ಲಿ 13 ವರೆ ಗುಂಟೆ ಜಾಗವನ್ನು ಬಸಪ್ಪ ಬಿನ್ ನಿಂಗಪ್ಪ ಕೆಂಚಪ್ಪ ಬಿನ್ ಪೂಜಾರಿ ಕರಿಯಪ್ಪ ರವರು ಗ್ರಾಮಸ್ಥರ ಪರವಾಗಿ ದಾರಿ ಸಲುವಾಗಿ ಖರೀದಿ ಮಾಡಿದ್ದರು ಎಂದರೆ ಸರಿ. ಸದರಿ ದಾರಿಯು ದಕ್ಷಿಣದಿಂದ ಉತ್ತರಕ್ಕೆ ಹೋಗುವ ದಾರಿ ಆಗಿರುತ್ತದೆ ಎಂದರೆ ಸರಿ. ಸರ್ವೇ ನಂಬರ್ 58 ಮತ್ತು 60 ರ ಪಶ್ಚಿಮದ ಅಂಚಿನಲ್ಲಿ ಸದರಿ ದಾರಿ ಇರುತ್ತದೆ ಎಂದರೆ ಸರಿ. ಸದರಿ ದಾರಿಯಲ್ಲಿಯೇ ಖರೀದಿ ಮಾಡಿದ ದಿನದಿಂದ ಗ್ರಾಮಸ್ಥರು ಓಡಾಡುತ್ತಾ ಬಂದಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ್ ಸ್ವತ್ತಿನಲ್ಲಿ ತೋರಿಸಿರುವ ಚೆಕ್ಕುಬಂದಿಯನ್ನು ನಿಪಿ1 ಕ್ರಯಪತ್ರದ ಆಧಾರದಲ್ಲಿ

ನಮೂದಿಸಿರುತ್ತೇನೆ. ಸದರಿ ಚೆಕ್ಕುಬಂದಿಯನ್ನು ನಾನು ಕೇವಲ 10 ಗುಂಟೆ ಜಾಗಕ್ಕೆ ನೀಡಿದ್ದು ಮೇಲೆ ಹೇಳಿದ ಒಟ್ಟು 30 ಗುಂಟೆ ಜಾಗಕ್ಕೆ ಆಗಿರುವುದಿಲ್ಲ ಎಂದರೆ ಸರಿ. ನಿಪಿ1 ಚೆಕ್ಕುಬಂದಿಯಲ್ಲಿ ನಮೂದಿಸಿರುವ ಜಾಗದ ಚೆಕ್ಕುಬಂದಿ ತಿಳಿದುಕೊಂಡಿರುತ್ತೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನನಗೆ ಕೇವಲ ದಾವಾ ಶೆಡ್ಯೂಲ್ ಸ್ವತ್ತಿನ ಚೆಕ್ಕುಬಂದಿ ಮಾತ್ರ ತಿಳಿದಿರುತ್ತದೆ ಎಂದು ನುಡಿಯುತ್ತಾರೆ. ದಾವಾ ಶೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟ ಚೆಕ್ಕುಬಂದಿಗೆ ಪೂರಕವಾದ ಯಾವುದೇ ದಾಖಲಾತಿಗಳನ್ನು ನಾನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಮೇಲೆ ಹೇಳಿರುವ 30 ಗುಂಟೆ ಜಾಗದ ಚೆಕ್ಕುಬಂದಿ ಕ್ರಯಪತ್ರದ ಅಡಿ ಪೂರ್ವಕ್ಕೆ ನಾನು ಉಳಿಸಿಕೊಂಡಿರುವ ಜಮೀನು, ಪಶ್ಚಿಮಕ್ಕೆ ಕೆರೆಹೊಸಹಳ್ಳಿ ಬಸಪ್ಪ ಮತ್ತು ಸಿದ್ದಪ್ಪ ರವರ ಜಮೀನು, ದಕ್ಷಿಣಕ್ಕೆ ಕೆದಗಿಕೆರೆ ಮತ್ತು ಉತ್ತರಕ್ಕೆ ಗೋಮಾಳ ಇರುತ್ತದೆ ಎಂದರೆ ಸರಿ.

ನಾನು ಎಸಿ ನ್ಯಾಯಾಲಯದಲ್ಲಿ ಒಂದು ಮೇಲ್ಮನವಿ ಸಲ್ಲಿಸಿದ್ದೆ ಎಂದರೆ ಸರಿ. ಸದರಿ ಮೇಲ್ಮನವಿಯಲ್ಲಿ ಸಿವಿಲ್ ನ್ಯಾಯಾಲಯದಲ್ಲಿ ನನ್ನ ಹಕ್ಕು ಸ್ಥಾಪಿಸುವಂತೆ ವಜಾ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಎಸಿ ರವರ ಆದೇಶದಂತೆ ಈ ದಾವಾ ಶೆಡ್ಯೂಲ್ ಸ್ವತ್ತಿಗೆ ನಾನು ಮಾಲೀಕನಾಗಿರುತ್ತೇನೆ ಎಂದು ಕೋರಿ ದಾವೆಯನ್ನು ಸಲ್ಲಿಸಿರುತ್ತೀರಾ ಎಂದರೆ ಸಾಕ್ಷಿಯು ಸದರಿ ದಾವೆಯು ಇದೇ ದಾವೆ ಆಗಿರುತ್ತದೆ ಎಂದು ನುಡಿಯುತ್ತಾರೆ. ವೀರಭದ್ರಪ್ಪ ನವರ ಮಗ ಪರಮೇಶ್ವರಪ್ಪ ರವರು ಬದುಕಿದ್ದು, ಅವರನ್ನು ಈ ದಾವೆಯಲ್ಲಿ ವಿಚಾರಣೆ ಮಾಡುವ ಅವಶ್ಯಕತೆ ನಮಗೆ ಇರುವುದಿಲ್ಲ. ನನ್ನ ವಾದ ಪತ್ರದಲ್ಲಿ ಸರ್ವೇ ನಂಬರ್ 65 ರಲ್ಲಿ ಪರಮೇಶ್ವರಪ್ಪ ರವರ ಒಪ್ಪಿಗೆ ಮೇರೆಗೆ ಗ್ರಾಮಸ್ಥರು ರಸ್ತೆ ನಿರ್ಮಾಣ ಮಾಡಿರುತ್ತಾರೆ ಎಂದು ಬರೆಸಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅದು ಕಣ್ತಪ್ಪಿನಿಂದ ಸರ್ವೇ ನಂಬರ್ 50 ರ ಬದಲು ಸರ್ವೇ ನಂಬರ್ 65 ಆಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಕಣ್ತಪ್ಪಿನಿಂದ ಆಗಿರುವ ವಿಚಾರ ನನಗೆ 6 ತಿಂಗಳ ಹಿಂದೆ ತಿಳಿದು ಬಂದಿರುತ್ತದೆ. ಸದರಿ ಪರಮೇಶ್ವರಪ್ಪ ರವರು ದಾರಿಗೆ ಒಪ್ಪಿಗೆ ನೀಡಿರುವ ಬಗ್ಗೆ ನನ್ನ ಬಳಿ ಯಾವುದೇ ದಾಖಲಾತಿಗಳು ಇರುವುದಿಲ್ಲ. ದಿಃ 11.09.1987 ರಂದು ಕೆಂಚಪ್ಪ ರವರು ಮೃತರಾದ ಬಗ್ಗೆ ನಾನು ನ್ಯಾಯಾಲಯಕ್ಕೆ ಇವರೆಗೂ ಯಾವುದೇ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ನಾನು ದಾವಾ ಶೆಡ್ಯೂಲ್ ಸ್ವತ್ತಿಗೆ ತೋರಿಸಿರುವ ಚೆಕ್ಕುಬಂದಿ ತಪ್ಪಾಗಿದ್ದು, ದಾವಾ ಶೆಡ್ಯೂಲ್ ಸ್ವತ್ತು ಅಸ್ತಿತ್ವದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಸರ್ವೇ ನಂಬರ್ 60/3 ರಲ್ಲಿ ಬಹು

ಮಾಲೀಕತ್ವದ ಪಹಣಿ ಆಗಿರುತ್ತದೆ ಎಂದರೆ ಸರಿ. ಕೆ ವಿ ಮಲ್ಲೇಶಪ್ಪ ರವರು ಈಗ ಜೀವಂತವಾಗಿರುತ್ತಾರೆ ಎಂದರೆ ಸರಿ. ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅದರ ಅವಶ್ಯಕತೆ ಇರುವುದಿಲ್ಲ ಎಂದು ನುಡಿಯುತ್ತಾರೆ. ಸರ್ವೇ ನಂಬರ್ 60 ರ ಉತ್ತರಕ್ಕೆ ಸರ್ವೇ ನಂಬರ್ 58 ಬರುತ್ತದೆ ಎಂದರೆ ಸರಿ. ಮೇಲೆ ಹೇಳಿರುವ ರಸ್ತೆಯು ಸರ್ವೇ ನಂಬರ್ 60 ಮತ್ತು 58 ರ ದಕ್ಷಿಣ-ಉತ್ತರವಾಗಿ ಹಾದು ಹೋಗಿರುತ್ತದೆ ಎಂದರೆ ಸರಿ. ದಾವಾ ಶೆಡ್ಯೂಲ್ ಸ್ವತ್ತಿನ ಮೇಲೆ ನಮಗೆ ಹಕ್ಕು ಇರುವುದನ್ನು ತೋರಿಸಲು ನಿಪಿ1 ಕ್ರಯಪತ್ರವನ್ನು ಹಾಜರುಪಡಿಸಿರುತ್ತೇನೆ. ದಾವಾ ಶೆಡ್ಯೂಲ್ ಸ್ವತ್ತು ಅಸ್ತಿತ್ವದಲ್ಲಿ ಇಲ್ಲದಿದ್ದರೂ ನಾನು ಅದರಲ್ಲಿ ಸ್ವಾಧೀನ ಇರುವುದಾಗಿ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಸಾಕ್ಷಿಗೆ 7 ಪೋಟೋಗಳನ್ನು ತೋರಿಸಲಾಗಿ ಅದರಲ್ಲಿ ಕಂಡು ಬರುವ ರಸ್ತೆಯನ್ನು ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ನಿಡಿ1 ರಿಂದ 7 ಎಂದು ಗುರುತಿಸಲಾಯಿತು. ಸಾಕ್ಷಿಯು ಮುಂದುವರೆದು ನಿಡಿ1 ರಿಂದ 7 ರಲ್ಲಿ ಕಾಣುವ ರಸ್ತೆಯು ಸರ್ವೇ ನಂಬರ್ 50 ರಲ್ಲಿ ಇದ್ದು ಅದಕ್ಕೂ ದಾವಾ ಶೆಡ್ಯೂಲ್ ಸ್ವತ್ತಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದು ನುಡಿಯುತ್ತಾರೆ.ನಿಡಿ 1 ರಿಂದ 7 ರಲ್ಲಿ ಕಂಡು ಬರುವ ರಸ್ತೆಯನ್ನು ಗ್ರಾಮ ಪಂಚಾಯಿತಿಯವರು ಉದ್ಯೋಗಖಾತ್ರಿ ಯೋಜನೆಯಡಿಯಲ್ಲಿ ಮಾಡಿರುತ್ತಾರೆ ಎಂದರೆ ಸರಿ. ಸದರಿ ರಸ್ತೆಯು ಪರಮೇಶ್ವರಪ್ಪ ರವರ ತೋಟದಿಂದ ಹಿಂದೂ ಸ್ಮಶಾನದವರೆಗೂ ಹೋಗುವ ರಸ್ತೆ ಆಗಿರುತ್ತದೆ ಎಂದರೆ ಸಾಕ್ಷಿಯು ಅದು ಇನ್ನು ಸಹ ಮುಂದುವರೆದು ಬಸಪ್ಪ ಬಿನ್ ಸಿದ್ದಪ್ಪ ರವರ ಜಮೀನಿಗೆ ಹೋಗುತ್ತದೆ ಎಂದು ನುಡಿಯುತ್ತಾರೆ. ಮೇಲೆ ಹೇಳಿರುವ ರಸ್ತೆಯ ಮೆಎಲೆ ನಮ್ಮ ಕುಟುಂಬಸ್ಥರಿಗೆ ಯಾವುದೇ ಹಕ್ಕು ಇರುವುದಿಲ್ಲ ಮತ್ತು ಅದು ಕೆರೆಹೊಸಹಳ್ಳಿ ಗ್ರಾಮಸ್ಥರಿಗೆ ಇರುವ ಓಡಾಡುವ ದಾರಿ ಎಂದರೆ ಸರಿಯಲ್ಲ. ನಿಪಿ1 ಕ್ರಯಪತ್ರದಲ್ಲಿ ಕಾಣುವ ದಾರಿಯನ್ನು ಸಾರ್ವಜನಿಕರು ಹಿಂದಿನಿಂದ ಉಪಯೋಗಿಸುತ್ತಾ ಬಂದಿರುತ್ತಾರೆ ಎಂದರೆ ಸರಿಯಲ್ಲ. ಸರ್ವೇ ನಂಬರ್ 58 ಮತ್ತು 60 ರಲ್ಲಿ ಇರುವ 30 ಗುಂಟೆ ರಸ್ತೆಯು ಗ್ರಾಮಸ್ಥರಿಗೆ ಸೇರಿರುವುದಿಲ್ಲ ಅದು ನಮ್ಮ ಕುಟುಂಬಕ್ಕೆ ಸೇರಿದ ಆಸ್ತಿ ಎಂದು ಘೋಷಣಾತ್ಮಕ ಪರಿಹಾರವನ್ನು ಈ ದಾವೆಯಲ್ಲಿ ಕೇಳಿರುವುದಿಲ್ಲ ಎಂದರೆ ಸರಿಯಲ್ಲ.

**:: ಮರು ವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸ ಇ ಎ ಒ

sd/-

ಸಿ.ಜೆ ಮತ್ತು ಹೆ. ಜೆ.ಎಂ.ಎಫ್.ಸಿ ನ್ಯಾಃ

ತರೀಕೆರೆ.

ಸಾಕ್ಷಿಯ ಸಹಿ: